# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 77(60) (ನಗರಾಭಿವೃದ್ಧಿ ಇಲಾಖೆಯಿಂದ ವರ್ಗಾವಣೆಯಾದ ಪ್ರಶ್ನೆ) |
| ಉತ್ತರಿಸಬೇಕಾಗದ ದಿನಾಂಕ | 04.03.2025 |
| ಉತ್ತರಿಸಬೇಕಾದ ಸಚಿವರು | ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಗೆ ಕೊಳಚೆ ನಿರ್ಮೂಲನೆ ಮಂಡಳಿಯಿಂದ ಬಿಡುಗಡೆ ಮಾಡಿರುವ ಅನುದಾನ ವೆಷ್ಟು ; ಈ ಅನುದಾನವನ್ನು ಯಾವ ಯಾವ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದೆ ; (ಕಾಮಗಾರಿ ವಿವರ ನೀಡುವುದು) | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿನ ಕೊಳಗೇರಿ ಪ್ರದೇಶಗಳಲ್ಲಿ ವಸತಿ ಯೋಜನೆ ಮತ್ತು ಕೊಳಚೆ ಪ್ರದೇಶಗಳ ಅಭಿವೃದ್ಧಿ ಯೋಜನೆಗೆ ಸರ್ಕಾರವು ಆಯವ್ಯಯದಲ್ಲಿ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ಅಭಿವೃದ್ಧಿ ಕಾಮಗಾರಿಗಳಿಗೆ ಮೂಲಭೂತ ಸೌಲಭ್ಯಗಳಾದ ಸಿ.ಸಿ.ರಸ್ತೆ, ಒಳಚರಂಡಿ, ಆರ್.ಸಿ.ಸಿ. ಚರಂಡಿಗಳ ಕಾಮಗಾರಿಗಳಿಗೆ "ಕೊಳಗೇರಿ ಸುಧಾರಣೆ ಯೋಜನೆಯಡಿ" ಅನುದಾನ ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನ ಮತ್ತು ಕಾಮಗಾರಿಗಳ ವಿವರಗಳನ್ನು **ಅನುಬಂಧ-ಅ** ರಲ್ಲಿ ಒದಗಿಸಲಾಗಿದೆ.<br><br>**ವಸತಿ ಸೌಲಭ್ಯ :**<br><br>2015-16ನೇ ಸಾಲಿನಿಂದ ಇದುವರೆವಿಗೂ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯನ್ನು ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಾದ ಡಾ. ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನ್ನು ಸಮನ್ವಯಗೊಳಿಸಿ ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿನ ಕೊಳಗೇರಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯದೊಂದಿಗೆ ವಸತಿ ಯೋಜನೆಯನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಗೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.<br><br>ಮಂಜೂರಾದ ಹಾಗೂ ಬಿಡುಗಡೆಯಾದ ಅನುದಾನ ಮತ್ತು ಕಾಮಗಾರಿಗಳ ವಿವರಗಳನ್ನು **ಅನುಬಂಧ-ಬ** ರಲ್ಲಿ ಒದಗಿಸಲಾಗಿದೆ. |
| ಆ) | ಕೊಳಚೆ ನಿರ್ಮೂಲನೆ ಮಂಡಳಿಗೆ ಸರ್ಕಾರದಿಂದ ಪ್ರತಿ ವರ್ಷ ಮಂಜೂರಾಗುವ ಮೊತ್ತವೆಷ್ಟು; ಯಾವ ಯಾವ ಕಾಮಗಾರಿ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಲಾಗುವುದು ? | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿನ ಕೊಳಗೇರಿ ಪ್ರದೇಶಗಳಿಗೆ ಅಭಿವೃದ್ಧಿ ಮತ್ತು ವಸತಿ ಯೋಜನೆಯ ಕಾಮಗಾರಿಗಳಿಗೆ ಮಂಜೂರಾಗಿರುವ ಬಿಡುಗಡೆ ಅನುದಾನ ವಿವರಗಳನ್ನು **ಅನುಬಂಧ-ಅ ಮತ್ತು ಬ** ಒದಗಿಸಲಾಗಿದೆ. |

ಸಂಖ್ಯೆ: ವಇ 45 ಹೆಚ್‌ಎಫ್‌ಎ 2025]

B. Zameer

**(ಬಿ. ಝಡ್. ಜಮೀರ್ ಅಹಮದ್ ಖಾನ್)**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

ಅನುಬಂಧ - "ಬಿ"

**ಕಾಮಗಾರಿ ಹೆಸರು: ಮೂಲಭೂತ ಸೌಲಭ್ಯ ಒದಗಿಸುವ ಕಾಮಗಾರಿಗಳು**

| ಕ್ರ.ಸಂ | ಜಿಲ್ಲೆ & ವರ್ಷ | ನಗರ/ಪಟ್ಟಣ | ಕಾಮಗಾರಿ ವಿವರ | ಮಂಜೂರಾದ ಅನುದಾನ (ರೂ. ಲಕ್ಷಗಳಲ್ಲಿ) | ಖರ್ಚಾದ ಅನುದಾನ |
|---|---|---|---|---|---|
| 01 | ಬೀದರ್ 2020-21 ನೇ ಸಾಲಿನಲ್ಲಿ | ಬೀದರ್ ನಗರ | ಸಿ.ಸಿ ರಸ್ತೆ ಮತ್ತು ಒಳಚರಂಡಿ ನಿರ್ಮಾಣ ಕಾಮಗಾರಿ | 12.81 | 12.38 |
| | | ಬೀದರ್ ನಗರ | ರಸ್ತೆ ಮತ್ತು ಒಳಚರಂಡಿ ನಿರ್ಮಾಣ ಕಾಮಗಾರಿ | 12.82 | 12.43 |
| | | ಹುಮನಾಬಾದ | ರಸ್ತೆ ಮತ್ತು ಒಳಚರಂಡಿ ನಿರ್ಮಾಣ ಕಾಮಗಾರಿ | 15.57 | 15.16 |
| | | ಔರಾದ | ಸಿ.ಸಿ ರಸ್ತೆ ಮತ್ತು ಒಳಚರಂಡಿ ನಿರ್ಮಾಣ ಕಾಮಗಾರಿ | 17.84 | 17.39 |
| | | | **ಒಟ್ಟು** | **74.15** | **72.45** |
| 02 | ಬೀದರ್ 2021-22 ನೇ ಸಾಲಿನಲ್ಲಿ | - | - | - | - |
| 03 | ಬೀದರ್ 2022-23 ನೇ ಸಾಲಿನಲ್ಲಿ | ಬೀದರ್ ನಗರ | ಪಕ್ಕಲವಾಡ್ ಕೊಳಚೆ ಪ್ರದೇಶದಲ್ಲಿ ಸಿ.ಸಿ ರಸ್ತೆ ನಿರ್ಮಾಣ ಕಾಮಗಾರಿ | 21.02 | 20.99 |
| | | ಬೀದರ್ ನಗರ | ಫೈಜಲಪೂರ ಕೊಳಚೆ ಪ್ರದೇಶದಲ್ಲಿ ರಸ್ತೆ ಮತ್ತು ಆರ್.ಸಿ.ಸಿ ಡ್ರೇನ್ ನಿರ್ಮಾಣ ಕಾಮಗಾರಿ | 34.28 | 34.24 |
| | | ಹುಮನಾಬಾದ | ಜೋಶಿಗಲ್ಲಿ ಕೊಳಚೆ ಪ್ರದೇಶದಲ್ಲಿ ರಸ್ತೆ ಮತ್ತು ಆರ್.ಸಿ.ಸಿ ಡ್ರೇನ್ ನಿರ್ಮಾಣ ಕಾಮಗಾರಿ | 27.42 | 27.40 |
| | | ಔರಾದ | ಓಲ್ಡ ಗಂಜ್ ಕೊಳಚೆ ಪ್ರದೇಶದಲ್ಲಿ ಸಿ.ಸಿ ರಸ್ತೆ ಮತ್ತು ಆರ್.ಸಿ.ಸಿ ಡ್ರೇನ್ ನಿರ್ಮಾಣ ಕಾಮಗಾರಿ | 30.36 | 30.26 |
| | | | **ಒಟ್ಟು** | **113.08** | **112.89** |

ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳ,
ಕಲಬುರಗಿ ಉಪ-ವಿಭಾಗ ಕಲಬುರಗಿ.

ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ,
ಕಲಬುರಗಿ ವಿಭಾಗ, ಕಲಬುರಗಿ

Scanned with OKEN Scanner

ಅನುಬಂಧ - "ಬ"

**ಬೀದರ್ ಜಿಲ್ಲೆಗೆ ಕೊಳಚೆ ನಿರ್ಮೂಲನೆ ಮಂಡಳಿಯಿಂದ ಬಿಡುಗಡೆ ಮಾಡಿರುವ ಅನುದಾನ ವಿವರ ಈ ಕೆಳಕಂಡಂತಿವೆ.**

**ಯೋಜನೆ ಹೆಸರು: ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)**

**ಕಾಮಗಾರಿ ಹೆಸರು: ಮನೆಗಳ ನಿರ್ಮಾಣ**

| ಕ್ರ.ಸಂ | ಜಿಲ್ಲೆ | ನಗರ / ಪಟ್ಟಣದ ಹೆಸರು | ಮಂಜೂರಾದ ಮನೆಗಳ ಸಂಖ್ಯೆ | ಮಂಜೂರಾದ ಅನುದಾನ (ರೂ. ಲಕ್ಷಗಳಲ್ಲಿ) | ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) | ಷರಾ |
|---|---|---|---|---|---|---|
| 01 | ಬೀದರ್ | ಬೀದರ್ ನಗರ | 1500 | 6301.56 | 5373.39 | ಕೊಳಚೆ ಪ್ರದೇಶದ ನಿವಾಸಿಗಳಿಗೆ ಮನೆಗಳನ್ನು ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆ. |
| 02 | | ಹುಮನಾಬಾದ | 250 | 1367.50 | 1222.40 | |
| 03 | | ಭಾಲ್ಕಿ ಪಟ್ಟಣ | 400 | 2188.00 | 2039.53 | |
| | | **ಹಂತ -1 & 3ರ ಒಟ್ಟು** | **2150** | 9857.06 | 8635.32 | |
| 04 | ಬೀದರ್ | ಬೀದರ್ ನಗರ | 750 | 4793.79 | 2919.75 | |
| 05 | | ಬಸವಕಲ್ಯಾಣ | 552 | 5513.35 | 1493.37 | |
| 06 | | ಬಸವಕಲ್ಯಾಣ | 800 | 3291.4 | 1744.25 | |
| 07 | | ಹುಮನಾಬಾದ | 500 | 3195.86 | 1157.00 | |
| 08 | | ಔರಾದ ಪಟ್ಟಣ | 350 | 2240.00 | 0 | |
| 09 | | ಚಿಟಗುಪ್ಪ ಪಟ್ಟಣ | 545 | 3483.49 | 628.83 | |
| | | **ಹಂತ -7ರ ಒಟ್ಟು** | **3497** | 22517.89 | 7943.2 | |
| | | **ಒಟ್ಟಾರೆ.** | **5647** | **32,374.95** | **16,578.52** | |

ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ,
ಕಲಬುರಗಿ ಉಪ-ವಿಭಾಗ ಕಲಬುರಗಿ.

ಕಾರ್ಯನಿರ್ವಾಹಕ ಅಭಿಯಂತರರು,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ,
ಕಲಬುರಗಿ ವಿಭಾಗ, ಕಲಬುರಗಿ

Scanned with OKEN Scanner